ದಿನಾಂಕ : 24.01.2025 ರಂದು ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ</u>** <u>3 ನೇ ಎದುರುದಾರರ ಪರ</u> **<u>ಶ್ರೀ ಕೆ.ಪಿ.ಆರ್. ವಕೀಲರಿಂದ,</u>**

ಈ ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು ಬೇರೆ ಯಾವುದೇ ನ್ಯಾಯಾಲಯದಲ್ಲಿ ಕೇಸ್ ಹಾಕಿರುವುದಿಲ್ಲ. ಮೋಟಾರ್ ಸೈಕಲ್ ನಂಬರ್.ಕೆಎ-34-ವಿ-6571 ವೀರಭದ್ರಪ್ಪರವರಿಗೆ ಸೇರಿದ ಮೋಟಾರ್ ಸೈಕಲ್ ಇರುತ್ತದೆ. ಅಪಘಾತದ ದಿನ ಮೋಟಾರ್ ಸೈಕಲ್ ಅನ್ನು ವೀರಭದ್ರಪ್ಪರವರೇ ಓಡಿಸುತ್ತಿದ್ದರು ಎಂದರೆ ಸರಿ. ನಾನು ಮೋಟಾರ್ ಸೈಕಲ್ ನಲ್ಲಿ ಹಿಂದೆ ಕುಳಿತುಕೊಂಡಿದ್ದೆ ಎಂದರೆ ಸರಿ. ಆ ದಿನ ನಾವು ಆದೋನಿಯಿಂದ ಮಂತ್ರಾಲಯಕ್ಕೆ ಹೋಗುತ್ತಿದ್ದೇವು ಎಂದರೆ ಸರಿ. ಕಾಲುವೆ ದಾಟಿದ ಮೇಲೆ ಪೆದ್ದತುಂಬಳಮ್ಮ ಗ್ರಾಮದ ಹತ್ತಿರ ಸಿಮೆಂಟ್ ಪೈಪ್ ಫ್ಯಾಕ್ಟರಿ ಇರುತ್ತದೆ ಎಂದರೆ ಸರಿ. ವೀರಭದ್ರಪ್ಪರವರು ಮೋಟಾರ್ ಸೈಕಲ್ ಅನ್ನು ಅತೀವೇಗದಿಂದ ಮಧ್ಯ ರಸ್ತೆಯಲ್ಲಿ ಚಾಲಯಿಸಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಲಾರಿ ನಂಬರ್.ಎಪಿ.39-ಡಿಇ-8924 ನಿಧಾನವಾಗಿ ಚಲಾಯಿಸಿಕೊಂಡು ಬರುತ್ತಿದರು ವೀರಭದ್ರಪ್ಪರವರೇ ತನ್ನ ಮೋಟಾರ್ ಸೈಕಲ್ ಅನ್ನು ವೇಗದಿಂದ ಚಲಾಯಿಸಿಕೊಂಡು ಬಂದು ಅಪಘಾತ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ಅಪಘಾತ ಆದ ನಂತರ ಮೊದಲು ನನ್ನನ್ನು ಆದೋನಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು ಎಂದರೆ ಸರಿ. ಆದೋನಿ ಆಸ್ಪತ್ರೆಯಲ್ಲಿ ಗುಣಮುಖ ಆಗಿದ ನಂತರ ಕರೆದುಕೊಂಡು ಹೋಗಿ ಎಂದು ವೈದ್ಯರು ನಮಗೆ ಹೇಳಿದರು ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ನಾನು ವಿಮ್ಸ್ ಆಸ್ಪತ್ರೆಯಲ್ಲಿ ಮತ್ತು ಸೆಂಟ್ ಮೇರಿ

ಆಸ್ಪತ್ರೆಯಲ್ಲಿ 15 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ಸುಳ್ಳು ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯಕೀಯ ಖರ್ಚು 4,50,000/- ರೂಪಾಯಿ ಮಾಡಿರುತ್ತೇನೆ ಎಂದು ಸುಳ್ಳು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಅನುಷ್ಕಾ ಆಸ್ಪತ್ರೆಯಲ್ಲಿ ನಿಪಿ.7 ರಂತೆ ನಾನು ಅಪಘಾತ ಆದ ನಂತರ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಆಗಿರುವ ಗಾಯಗಳು ಸಣ್ಣ-ಪುಟ್ಟ ಗಾಯಗಳು ಇರುತ್ತವೆ ಯಾವುದೇ ತರಹ ನ್ಯೂನ್ಯತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಆಗಿರುವುದು ದಿನಾಂಕಃ 14.01.2020 ರಂದು. ನಿಪಿ.4 ರಲ್ಲಿ ದಿನಾಂಕಃ 13.01.2020 ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಹೌದು ವೈದ್ಯರು ಸುಳ್ಳು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಅಪಘಾತದ ಮುಂಚೆ ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಮತ್ತು ಅದರಿಂದ ನನಗೆ 17,000/- ರೂಪಾಯಿ ತಿಂಗಳಿಗೆ ಬರುತ್ತಿತ್ತು ಎಂದು ನಾನು ಸುಳ್ಳು ಬರೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಪಾಲಿಸಿ ನಂಬರ್ ಮತ್ತು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಪಾಲಿಸಿ ಚಾಲ್ತಿಯಲ್ಲಿ ಇತ್ತು ಎಂದು ಬರೆದಿಲ್ಲ ಎಂದರೆ ಸರಿ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ಪಾಲಿಸಿ ದಾಖಲೆಯನ್ನು ನೀವು ಪೆದ್ದತುಂಬಳಮ್ಮ ಪೊಲೀಸ್ ಠಾಣೆಯಲ್ಲಿ ಕೊಟ್ಟಿದ್ದು ಅದರಲ್ಲಿ ಪಾಲಿಸಿಯು ದಿನಾಂಕಃ 01.02.2020 ರಿಂದ 31.01.2021 ರವರೆಗೆ ಇರುತ್ತದೆ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತದ ದಿನದಂದು ಪಾಲಿಸಿ ಚಾಲ್ತಿಯಲ್ಲಿ ಇಲ್ಲದೇ ಇರುವ

ಕಾರಣ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಸಿಗಲೀ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ,**

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.